# ಸಹಾಯಕ ಆಯುಕ್ತರ ನ್ಯಾಯಾಲಯ, ಬಳ್ಳಾರಿ

ಸಂ: ಕಂದಾಯ/ಅಪೀಲು/314/13-14 ದಿನಾಂಕ :25-10-2016

ಉಪಸ್ಥಿತರು: ಶ್ರೀ ಲೋಕೇಶ್ ಪಿ.ಎನ್ (ಕ.ಆ.ಸೇ)

ಸಹಾಯಕ ಆಯುಕ್ತರು, ಬಳ್ಳಾರಿ.

| ವಾದಿಗಳು | ಪ್ರತಿವಾದಿಗಳು |
|---|---|
| 1.ಶ್ರೀ ಬಿ. ಸುಧಾಕರ್ ತಂದೆ ದಿ. ಬಿ. ಪುಲ್ಲಯ್ಯ, ಪಾರ್ವತಿ ನಗರ, ಸಿರುಗುಪ್ಪ<br><br>(ಶ್ರೀ ಕೆ. ಮಹಮದ್ ರಫೀಕ್, ವಕೀಲರು, ಬಳ್ಳಾರಿ) | (1) ತಹಶೀಲ್ದಾರರು, ಸಿರುಗುಪ್ಪ<br>(2) ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ |

ದಾವಾ ಜಮೀನಿನ ವಿವರ :-

| ತಾಲ್ಲೂಕು | ಗ್ರಾಮ | ಸ. ನಂ. | ವಿಸ್ತೀರ್ಣ (ಎಕರೆಗಳಲ್ಲಿ) |
|---|---|---|---|
| ಸಿರುಗುಪ್ಪ | ದೇವಲಾಪುರ | 114/A | 0.06.00 |

--@@@--

ವಾದಿಯು ಅವರ ವಕೀಲರ ಮುಖಾಂತರ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ರ ಕಲಂ 136(2) ರಡಿಯಲ್ಲಿ ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ ಇವರ ಎಂ ಆರ್ ನಂ H54/11-12 ದಿನಾಂಕ 10/02/2012 ರ ಆದೇಶದ ವಿರುದ್ಧ ಈ ನ್ಯಾಯಾಲಯಕ್ಕೆ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಮೇಲ್ಮನವಿಯನ್ನು ದಾಖಲಿಸಿಕೊಳ್ಳಲಾಗಿರುತ್ತದೆ. ನೈಸರ್ಗಿಕ ನ್ಯಾಯ ದೃಷ್ಠಿಯಿಂದ ಉಭಯ ಪಕ್ಷಗಾರರಿಗೂ ನೋಟೀಸಗಳನ್ನು ಕಳುಹಿಸಿ ದಿನಾಂಕ: 28.01.2014,07.04.2015,07.06.2016,08.09.2016,25.10.2016 ಗಳಂದು ಪ್ರಕರಣದ ವಿಚಾರಣೆಯನ್ನು ಕೈಗೊಳ್ಳಲಾಗಿರುತ್ತದೆ.

ಸದರಿ ಪ್ರಕರಣಕ್ಕೆ ಸಂಬಂಧಿಸಿದಂತೆ ವಾದಿಗಳು ಅವರ ವಕೀಲರು ಮುಖಾಂತರ ದಿನಾಂಕ: 10/25/2016 ರಂದು ಈ ನ್ಯಾಯಾಲಯಕ್ಕೆ  ಹಾಜರಾಗಿ, ಸಿರುಗುಪ್ಪ ತಾಲ್ಲೂಕಿನ ದೇವಲಾಪುರ ಗ್ರಾಮದ ಸ.ನಂ 114/A ವಿಸ್ತೀರ್ಣ: 0.06.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ ಇವರ ಎಂ ಆರ್ ನಂ H54/11-12 ದಿನಾಂಕ 10/02/2012 ರಲ್ಲಿ ಜೆ-ನಮೂನೆಯಲ್ಲಿರುವ ಹಕ್ಕು ಬದಲಾವಣೆ ವಿವರ ಮತ್ತು ಲಗತ್ತು ದಸ್ತಾವೇಜಿನಲ್ಲಿರುವ ವಿವರಗಳು ಪರಸ್ಪರ ತಾಳೆ ಇರದ ಕಾರಣ ಹಕ್ಕು ಬದಲಾವಣೆ ಗೈರು ಮಂಜೂರು ಮಾಡಿರುವುದನ್ನು ಪ್ರಶ್ನಿಸುತ್ತಾ,ಕ್ರುಪತ್ರದಂತೆ ವಾದಿಗಳ ಹೆಸರಿಗೆ ಹಕ್ಕು ಬದಲಾವಣೆ ಮಾಡಲು ಕೋರಿರುತ್ತಾರೆ

ವಾದಿಗಳು ಈ ನ್ಯಾಲಯಕ್ಕೆ ಸಲ್ಲಿಸಿದ ಮೇಲ್ಮನವಿಯನ್ನು ಹಾಗೂ ಪ್ರಶ್ನಿತ ಎಂ ಆರ್ ನಂ H54/11-12 ದಿನಾಂಕ 10/02/2012 ಪರಿಶೀಲಿಸಲಾಗಿ ಸ.ನಂ.114/A ಪರಿಶೀಲಿಸಿ ಕರ್ನಾಟಕ ಭೂಕಂದಾಯ ಕಾಯ್ದೆ ಕಲಂ 95 ಉಲ್ಲಂಘನೆ  ಮಾಡಿ ಕಂದಾಯ ನಿವೇಶನಗಳನ್ನು ರಚನೆ ಮಾಡಿ ಮಾರಾಟ ಮಾಡಿರುವುದು ಕಂಡು ಬಂದಿರುತ್ತದೆ.ಇದು Town & Conutry Planning Act ಉಲ್ಲಂಘನೆ ಸಹ ಆಗಿರುವುದರಿಂದ  ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ ಇವರು ಹಕ್ಕು ಬದಲಾವಣೆ ಗೈರು ಮಂಜೂರು ಮಾಡಿರುವುದು ಸಂಜಸವಾಗಿರುವುದರಿಂದ,ಸದರಿ ಮೇಲ್ಮನವಿಯನ್ನು ಈ ಹಂತದಲ್ಲಿಯೇ  ವಜಾಗೊಳಿಸಿ ಆದೇಶಿಸುವ ಈ ಕೆಳಕಂಡಂತೆ ಆದೇಶ.

:: ಆದೇಶ ::

**ವಾದಿಯ ಮೇಲ್ಮನವಿ ವಜಾಗೊಳಿಸಿದೆ.**

ಪೀಠಿಕೆಯಲ್ಲಿ ವಿವರಿಸಿದ ಕಾರಣಗಳ ಹಿನ್ನೆಲೆಯಲ್ಲಿ ಸಿರುಗುಪ್ಪ ತಾಲ್ಲೂಕಿನ ದೇವಲಾಪುರ ಗ್ರಾಮದ ಸ.ನಂ 114/A ವಿಸ್ತೀರ್ಣ: 0.06.00 ಎಕರೆ ಜಮೀನಿಗೆ ಸಂಬಂಧಿಸಿದಂತೆ ಕಂದಾಯ ನಿರೀಕ್ಷಕರು, ತೆಕ್ಕಲಕೋಟೆ ಇವರ ಎಂ ಆರ್ ನಂ H54/11-12 ದಿನಾಂಕ 10/02/2012 ಆದೇಶವನ್ನು ಎತ್ತಿಹಿಡಿದಿದ್ದು. ವಾದಿಗಳು ತುಂಡು ಜಮೀನು ಖರೀದಿಸಿದ್ದು, ಕರ್ನಾಟಕ ಭೂಕಂದಾಯ ಕಾಯ್ದೆಕಲಂ 95 ನ್ನು ಉಲ್ಲಂಘನೆಯಾಗಿರುವುದು ಕಂಡುಬಂದಿರುತ್ತದೆ. ವಾದಿಯ ಮೇಲ್ಮನವಿಯನ್ನು ಈ ಹಂತದಲ್ಲಿಯೇ ವಜಾಗೊಳಸಿ ಆದೇಶಿಸಿದೆ.

ಈ ಆದೇಶವನ್ನು ಹೇಳಿ, ಬರೆಯಿಸಿ ತಪ್ಪುಗಳನ್ನು ತಿದ್ದಿ ದಿನಾಂಕ: 25.10.2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಗಿದೆ.

ಸಹಾಯಕ ಆಯುಕ್ತರು,

ಬಳ್ಳಾರಿ